# ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ 'ಗಾಳಿಪಟ' ಹಿಡಿದ ಯೋಗರಾಜ ಭಟ್



ಧಾರವಾಡ ಲೋಕಸಭಾ ಕ್ಷೇತ್ರದ ಮತದಾರರಿಗೆ ಈ ಬಾರಿ ಅಚ್ಚರಿಯ ಸ್ಪರ್ಧೆಯೊಂದು ಕಾದಿದೆ. ಕನ್ನಡ ಚಿತ್ರರಂಗದ ಜನಪ್ರಿಯ ನಿರ್ದೇಶಕರಲ್ಲೊಬ್ಬರಾದ ಯೋಗರಾಜ ಭಟ್ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. 'ಗಾಳಿಪಟ–2' ಚಿತ್ರದ ತಯಾರಿಯಲ್ಲಿ ಭಟ್ಟರು ತೊಡಗಿಕೊಂಡಿದ್ದಾರೆ ಎನ್ನುವ ವದಂತಿಗಳ ನಡುವೆಯೇ, ಅವರು ಸಿದ್ಧತೆ ನಡೆಸುತ್ತಿರುವುದು ಸಿನಿಮಾಕ್ಕಲ್ಲ, ಚುನಾವಣೆಗೆ ಎನ್ನುವ ಸುದ್ದಿ ಹೊರಬಿದ್ದಿದೆ. ಈ ಹಿನ್ನೆಲೆಯಲ್ಲಿ ಭಟ್ಟರನ್ನು ಮಾತನಾಡಿಸಲು ಬೆಂಗಳೂರಿನ ಬನಶಂಕರಿಯ ಅವರ ಕಚೇರಿಗೆ 'ಸುಧಾ' ಬಳಗ ಹೋದಾಗ, ಅಲ್ಲಿ ಚುನಾವಣಾ ಸಿದ್ಧತೆಯ ತುರುಸೇನೂ ಕಾಣಿಸಲಿಲ್ಲ. 'ಪಂಚತಂತ್ರ' ಚಿತ್ರದ ನಾಯಕ–ನಾಯಕಿ ವಿಹಾನ್ ಹಾಗೂ ಸೋನಾಲ್ ಅಂಗಳದಲ್ಲಿ ನಿಂತು ಗಾಳಿಪಟ ಹಾರಿಸುವ ಪ್ರಯತ್ನದಲ್ಲಿದ್ದರು. ತಮ್ಮ ಕೋಣೆಯೊಳಗೆ ಕುಳಿತಿದ್ದ ಭಟ್ಟರು ಸೀಸದ ಕಡ್ಡಿಯಿಂದ ಬಿಳಿಹಾಳೆಯ ಮೇಲೆ ಗಾಳಿಪಟದ ಚಿತ್ರ ಬಿಡಿಸುತ್ತಿದ್ದರು. ಚಹಾ ಗುಟುಕರಿಸುತ್ತ ಸುತ್ತುಬಳಸಿನ ಮಾತುಗಳಿಲ್ಲದೆ ನೇರ ಪ್ರಶ್ನೆಯೊಂದಿಗೆ ಸಂದರ್ಶನ ಮೊದಲಾಯಿತು.

◆ **ನೀವು ಚುನಾವಣೆಗೆ ನಿಲ್ಲುತ್ತಿರುವುದು ಏಕೆ?**

ನಾನು ಚುನಾವಣೆಗೆ ಯಾಕೆ ನಿಲ್ಲಬಾರದು ಹೇಳಿ. ನೀವು ಚುನಾವಣೆಗೆ ಯಾಕೆ ನಿಲ್ತಿದ್ದೀರಿ ಎನ್ನೋ ಪ್ರಶ್ನೆಯನ್ನು ನೀವು ಎಂದಾದರೂ ಯಡ್ಯೂರಪ್ಪನವರನ್ನೋ ಸಿದ್ಧರಾಮಯ್ಯನವರನ್ನೋ ಯಾಕೆ ಕೇಳಿಲ್ಲ? ಈ ಪ್ರಶ್ನೆಯನ್ನು ದೊಡ್ಡ ಗೌಡರಿಗೆ ಕೇಳುವ ಧೈರ್ಯ ನಿಮಗಿದೆಯಾ? ದೊಡ್ಡೋರ ಮಾತಿರಲಿ, ಮಂಡ್ಯದಲ್ಲಿ ಎಲೆಕ್ಷನ್‌ಗೆ ನಿಂತಿರುವ ಚಿಕ್ಕ ಗೌಡರನ್ನು ಕೇಳಲಿಕ್ಕೆ ಆಗುತ್ತಾ? ಅವರಿಗೆಲ್ಲ ಕೇಳದ ಪ್ರಶ್ನೇನ ನನಗೆ ಮಾತ್ರ ಯಾಕೆ ಕೇಳ್ತಿದ್ದೀರಿ? ನಿಮ್ಮ ಪ್ರಶ್ನೇಲಿ ಏನೋ ಐಬಿದೆ.

◆ **ನಮ್ಮ ಪ್ರಶ್ನೆಯನ್ನು ನೀವು ತಪ್ಪು ತಿಳಿದುಕೊಂಡಿರಿ. ಪ್ರಶ್ನೆ ಇಷ್ಟೇ – ಸಿನಿಮಾ ಮಾಡಿಕೊಂಡಿದ್ದ ನೀವು ಇದ್ದಕ್ಕಿದ್ದಂತೆ ಚುನಾವಣಾ ರಾಜಕಾರಣಕ್ಕೆ ಬರುತ್ತಿರುವುದು ಏಕೆ?**

ಮತ್ತೆ ಅದೇ ತಪ್ಪು ಮಾಡ್ತಿದ್ದೀರಿ. ಸಿನಿಮಾದೋರು ರಾಜಕೀಯಕ್ಕೆ ಬಂದರೆ ನಿಮಗೆಲ್ಲ ಎಂಥದು ಗ್ಯಾಸ್ ಟ್ರಬಲ್ ಅನ್ನೋದೆ ನನಗೆ ಅರ್ಥ ಆಗ್ತಿಲ್ಲ.

◆ **ಸಿನಿಮಾಕ್ಕೂ ರಾಜಕೀಯಕ್ಕೂ ಎತ್ತಣ ಸಂಬಂಧ...**

ಅದೇ ಅದೇ ತಪ್ಪು ಅಂತ. ಸಿನಿಮಾದೋರು ಯಾಕೆ ರಾಜಕಾರಣ ಮಾಡಬಾರದು? ಸಿನಿಮಾ ಅಂದ್ರೆ ನೀವೆಲ್ಲ ಏನಂದುಕೊಂಡಿದ್ದೀರಿ... ಅದೊಂದು ಪ್ರಬಲ ಮಾಧ್ಯಮ ಕಣ್ರೀ. ಜನರನ್ನು ಎಜುಕೇಟ್ ಮಾಡಲಿಕ್ಕೆ ಸಿನಿಮಾಗಿಂತಲೂ ಒಳ್ಳೇ ಮೀಡಿಯಮ್ಮು ಬೇರೆ ಯಾವುದಿದೆ ಹೇಳ್ರಿ... ಸಿನಿಮಾ ಮೂಲಕ ಜನರನ್ನು ಎಜುಕೇಟ್ ಮಾಡಲಿಕ್ಕೆ ಸಾಧ್ಯ ಇದೆ ಕಣ್ರೀ...

◆ **ಒಂದು ಉದಾಹರಣೆ ಹೇಳಿ ಸಾರ್...**

ಮಲಯಾಳಂ ಸಿನಿಮಾಗಳು ತೀರಾ ಇತ್ತೀಚಿನವರೆಗೂ ನಮ್ಮ ಹುಡುಗ್ರನ್ನ ಸೆಕ್ಸುಯಲಿ ಎಜುಕೇಟ್ ಮಾಡ್ತಿದ್ದವಲ್ರೀ... ಹಾಂ... ಇದು ಆಫ್ ದಿ ರೆಕಾರ್ಡ್... ಬರ್ದು ಗಿರ್ದು ಬಿಟ್ಟೀರಿ ಮತ್ತೆ... ಬೇಕಾದ್ರೆ 'ಯಜಮಾನ' ಚಿತ್ರದ ಉದಾಹರಣೆ ಬರೀರಿ. ಆ ಸಿನಿಮಾ ನೋಡಿ ಯಾರೋ ಟೆಕ್ಕಿ ತಮ್ಮ ಹಳ್ಳಿ ನೆನಪಿಸಿಕೊಂಡು ಲಗೇಜ್ ಪ್ಯಾಕ್ ಮಾಡಿದ್ರಂತೆ...

ಈಗ ಹೇಳ್ತೇನೆ ಕೇಳಿ... ನಾನು ಎಲೆಕ್ಷನ್‌ಗೆ ನಿಲ್ಲೋಕೆ ಒಂದು ಮುಖ್ಯವಾದ ಕಾರಣ ಇದೆ. ಇತ್ತೀಚಿನ ದಿನಗಳಲ್ಲಿ ಸಿನಿಮಾದೋರನ್ನ ಕಂಡ್ರೆ ಜನರಿಗೆ ಒಂದು ರೀತಿ ಅವರ್ಷನ್ ಕಣ್ರೀ... ನಮ್ಮ ಹೀರೊ ಹೀರೊಯಿನ್‌ಗಳ ಬಗ್ಗೆಯಂತೂ ನೂರೆಂಟು ಕಥೆ ಕಟ್ತಾರೆ. ಪಾಪ, ಅವರೂ ಮನುಷ್ಯರು ಅಲ್ವೇನ್ರಿ... ಇನ್ನು ಸಿನಿಮಾ ವಿಷಯಕ್ಕೆ ಬಂದ್ರೆ, ಈ ಸಿನಿಮಾಗಳಿಂದ ಸಂಸ್ಕೃತಿ ಎಲ್ಲ ಎಕ್ಕುಟ್ಟೋಯ್ತು ಅಂತಾರೆ... ಇವತ್ತಿನ ಸಿನಿಮಾಗಳಿಂದ ಸಾಮಾಜಿಕ ಪರಿಣಾಮ ಸಾಧ್ಯವಿಲ್ಲ ಅಂತಾರೆ... ಇಂಥ ಮಾತುಗಳನ್ನು ಕೇಳಿದಾಗಲೆಲ್ಲ ಬೀಪಿ ರೈಸ್ ಆಗುತ್ತೆ. ಇದಕ್ಕೆಲ್ಲ ಏನಾದ್ರೂ ಮಾಡಬೇಕು ಅಂತ ಯೋಚಿಸ್ತಿರುವಾಗಲೇ ಎಲೆಕ್ಷನ್ ಡಿಕ್ಲೇರ್ ಆಯ್ತು. ಜೈ ಭಜರಂಗಬಲಿ ಅಂತ ಎಲೆಕ್ಷನ್‌ಗೆ ನಿಲ್ಲೋದಿಕ್ಕೆ ಡಿಸೈಡ್ ಮಾಡ್ದೆ.

◆ **ನಿಮ್ಮ ಮಾತಿನಷ್ಟು ನಿಮ್ಮ ನಿರ್ಧಾರ ಸರಳವಾಗಿಲ್ಲ ಅನ್ಸುತ್ತೆ. ಬಹುಶಃ ನಿಮ್ಮ ರಾಜಕೀಯ ನಿರ್ಧಾರದ ಹಿಂದೆ ಬೇರೆ ಯಾವುದೋ ಪ್ರಬಲವಾದ ಕಾರಣ ಇರಬೇಕು...**

ಥೋ... ನೀವು ಬಿಡಲ್ಲ ಕಣ್ರೀ... ನಕ್ಷತ್ರಿಕ ಇದ್ದಂಗೆ... ಹೌದು ಕಣ್ರೀ... ಒಂದು ಕಾರಣ ಇದೆ... ಇತ್ತೀಚೆಗೆ ಆ ಕೆ.ಆರ್. ಪೇಟೆಯೋ ಉಪ್ಪಾರಪೇಟೆಯೋ ಶಾಸಕ ಇದ್ದಾರಲ್ರೀ... ಏನ್ರೀ ಅವರ ಹೆಸರು... ಏನೋ ಒಂದು ಬಿಡಿ... ಆ ಶಾಸಕರ ಮಾತು ಕೇಳಿದ್ರಾ... 'ಸಿನಿಮಾದೋರು ಸುಮ್ಮನೆ ಸಿನಿಮಾ ಮಾಡಿಕೊಂಡು ಇರಲಿ. ಅವರಿಗೆ ರಾಜಕೀಯ ಯಾಕೆ? ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರೋದು ಅನ್ನೋದು ಅವರಿಗೆ ನೆನಪಿರಲಿ. ಸಿನಿಮಾದೋರು ರಾಜಕೀಯ ಮಾಡಿದ್ರೆ ಅವರ ಆಸ್ತಿಪಾಸ್ತಿ ತನಿಖೆ ಮಾಡಿಸಬೇಕಾಗುತ್ತೆ...' ಅಂತೆಲ್ಲ ಧಮ್ಕಿ ಹಾಕಿದ್ದಾರೆ. ಸ್ವಾಭಿಮಾನ ಇರೋ ಯಾರಿಗಾದ್ರೂ ಈ ಮಾತುಗಳನ್ನು ಕೇಳಿದ್ರೆ ರಕ್ತ ಕುದಿಯಲ್ಲವಾ? ಬೇಕಿದ್ರೆ ನಿಮ್ಮ ಕಿವಿಗೆ ದಾಸವಾಳ ಇಡ್ತೀದ್ದೀನಿ ಅಂದ್ಕೊಳ್ಳಿ... ಆ ಶಾಸಕರ ಮಾತು ಕೇಳಿ ನಂಗೆ ಮೈಯೆಲ್ಲ ಉರಿದದ್ದು ನಿಜ. ಆದರೆ ಸುಮ್ಮನೆ ಉರಿಸ್ಕಂಡ್ರೆ